ಮೂಲ ದಾವಾ ಸಂಖ್ಯೆ. 37/2023 ಪಿ ಡಬ್ಲ್ಯೂ 3

(ದಿನಾಂಕ 24-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-

ಆಂಜನೇಯಸ್ವಾಮಿ ಇವರು ಈ ದಾವೆಯನ್ನು ನಾಗಪ್ಪ ಇವರ ವಿರುದ್ಧ ದಾಖಲಿಸಿದ್ದಾರೆ. ದಾವಾ ಜಮೀನು ಸರ್ವೆ ನಂಬರ್ ನನಗೆ ಗೊತ್ತಿಲ್ಲ ಆದರೆ ಅದು 3 ಎಕರೆ 80 ಸೆಂಟ್ಸ ಇದೆ. ದಾವಾಸ್ತಿ ಸರ್ವೆ ನಂಬರ್ ಏನು, ಅದರ ಒಟ್ಟು ವಿಸ್ತೀರ್ಣ ಎಷ್ಟು ಯಾರ್ಯಾರ ಹೆಸರಿಗೆ ಎಷ್ಟು ಕ್ಷೇತ್ರ ಇದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯ ಹೆಸರು ಎಷ್ಟು ಕ್ಷೇತ್ರ ದಾವಾ ಸರ್ವೆ ನಂಬರಿನಲ್ಲಿ ದಾಖಲಿದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ.

ದಾವಾ ಜಮೀನಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ. ಪ್ರತಿವಾದಿಯ ತಂದೆ ಹೊನ್ನಮ್ಮ ಇವರಿಂದ 2 ಎಕರೆ 80 ಸೆಂಟ್ಸ ಜಮೀನನ್ನು ದಿಃ11-01-2005 ರಂದು ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅಲ್ಲಿಂದ ಸದರಿ 2.80 ಎಕರೆ ಜಮೀನಿನಲ್ಲಿ ಪ್ರತಿವಾದಿಯ ತಂದೆ ಮತ್ತು ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅವರ ತಂದೆ ಮರಣದ ನಂತರ ಪ್ರತಿವಾದಿ ಮತ್ತು ಅವರ ಸಹೋದರನ ನಡುವೆಯಾದ ಪಾಲುವಿಭಾಗದಲ್ಲಿ 2.80 ಎಕರೆ ಜಮೀನು ಪ್ರತಿವಾದಿಯ ಪಾಲಿಗೆ ಬಂದಿರುತ್ತದೆಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹಾ ನನಗೆ ಗೊತಿತಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ 2.80 ಎಕರೆ ಜಮೀನಿನಲ್ಲಿ ಇವತ್ತಿಗೂ ಪ್ರತಿವಾದಿ ಸ್ವಾಧೀನದಲ್ಲಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಸೇರಿದ 80 ಸೆಂಟ್ಸ ಜಮೀನನ್ನು ಕಬಳಿಸುವ ಉದ್ದೇಶದಿಂದ ವಾದಿಯರು ಈ ದಾವೆಯನ್ನು ದಾಖಲಿಸಿದ್ದಾರೆಂದರೆ ಸರಿಯಲ್ಲ.

1ನೇ ವಾದಿ ನನಗೆ ದೂರದ ಸಂಬಂಧಿ ಮತ್ತು ಅವರ ಜಮೀನಿನ ಭಿತ್ತನೆ ಕೆಲಸವನ್ನು ನಾನೇ ಮಾಡುತ್ತೇನೆ. ಆ ಕಾರಣದಿಂದಾಗಿ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ